SRI D. K. NAIKAR.—Government have issued instructions to hold an enquiry and take surcharge proceedings.

ಶ್ರೀ ಸಿ. ಬೈರೇಗೌಡ.—ನರ್ಕಾರದವರು ಡಿವಿಜನಲ್ ಕಮಿಷನರ್‌ರವರಿಗೆ ಆದೇಶ ಕೊಟ್ಟಿದ್ದು ಯಾವಾಗ ? ಮತ್ತು ಡಿವಿಜನರ್ ಕಮಿಷನರ್‌ರವರು ಇಲ್ಲಿಯವರೆಗೆ ತೆಗೆದುಕೊಂಡಿರುವ ಕ್ರಮ ಗಳಾದರೂ ಏನು ಎಂಬುದನ್ನು ಹೇಳುತ್ತೀರಾ ಸ್ವಾಮಿ ?

ಶ್ರೀ ಡಿ ಕೆ. ನಾಯ್ಕರ್.—ಈ ವಿಚಾರಣೆ ಯಾವ ಸ್ಟೇಜ್‌ನಲ್ಲಿದೆ? ಎಲ್ಲೆಲ್ಲಿ ಏನೇನು ಆಗಿದೆ ಎಂಬುದನ್ನು ತಾವು ವಿವರವಾಗಿ ಕೇಳಬೇಕೆಂದರೆ, ಅದಕ್ಕೆ ಬೇರೆ ನೋಟೀಸ್ ಕೊಡಿ.

SRI BAPU GOWDA.—The persons who have committed this offence is known. Where is the need for departmental enquiry when the person responsible for the offence is known ?

ಶ್ರೀ ಡಿ. ಕೆ. ನಾಯ್ಕರ್. —ಮಾನ್ಯ ಅಧ್ಯಕ್ಷೆಣಿಯವರೆ, ಇದನ್ನು ಪ್ರೊಸೀಜರ್ ಪ್ರಕಾರ ಮಾಡ ಬೇಕೆಂದು ನಾನು ಆಗಲೇ ವಿಶೇಷವಾಗಿ ವಿವರಣೆ ಮಾಡಿ ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷೆಣಿಯವರೆ ನಾವು ಕೇಳಿದ್ದು.....

ಅಧ್ಯಕ್ಷರು.—ನೀವು ಹೇಳಿದಂತೆಯೇ ಎಲ್ಲವನ್ನೂ ಮಾಡುವುದಕ್ಕಾಗುತ್ತದೆಯೆ ?

ಶ್ರೀ ಡಿ ಕೆ. ನಾಯ್ಕರ್.—ಮುನಿಸಿಪಾಲಿಟೀಸ್ ಆಕ್ಟ್‌ನಲ್ಲಿ ಸೆಕ್ಷನ್ 295 ಮತ್ತು 296ನ್ನು ಓದಿದರೆ ಮಾನ್ಯ ಸದಸ್ಯರಿಗೆ ಎಲ್ಲಾ ಅರ್ಥವಾಗುತ್ತದೆ.

Amalgamation of Societies in Tiptur Taluk

478. SRI T. M. MANJUNATH (Tiptur).—Will the Minister for co-operation be pleased to state ;—

(*a*) the number of Societies amalgamated in Tiptur taluk ;

(*b*) the names of those societies ;

(*c*) whether any stay order from the Hon'ble High Court of Karnataka has been issued in connection with the amalgamation of Societies in Tiptur Taluk ;

(*d*) whether it is a fact that even after a stay order from the High Court was issued some of the societies still functioning ?

SRI K. H. RANGANATH (Minister for Co-operation).—

(*a*) 35

(*b*) List appended

(*c*) Yes

(*d*) Societies which had started functioning immediately after reorganisation, taking over charge from the amalgamating societies prior to the issue of stay order, have been functioning.

List of Societies Amalgamated in Tiptur Taluk

1.	Seva Sahakara Sangha Ltd.		Jabgatta
2.	do	do	Byranayakanahalli
3,	do	no	Halenahalli
4.	do	do	Anchekoppal
5.	do	do	Hulihalli
6.	do	do	Gudigondanahalli
7.	do	do	Thimmalapura
8.	do	do	Dasanakatte
9.	do	do	Muddenahally
10.	do	do	Ganganghatta
11.	do	do	Edanahalli
12.	do	do	Anugondanahalli
13.	do	do	Mathihalli
14.	do	do	Gurugadahalli
15.	do	do	Bannihalli
16.	do	do	Albur
17.	do	do	Bajagoor
18.	do	do	Kalkere
19.	do	do	Eachanoor
20.	do	do	Gungaramale
21.	do	do	Kenchagatte
22.	do	do	Halkurke
23.	F.S C.S. Ltd.,		Honnavalli
24	Seva Sahakara Sangha Ltd.,		Baluvaneralu
25.	do	do	Dasarigatta
26.	do	do	Karadi
27.	Seva Sahakara Sangha Ltd.,		Bennayakanahally
28.	do	do	Rangapura
29.	do	do	Madanoor
30.	do	do	Thalasur
31.	do	do	Nonavinakere
32.	do	do	Margondanahalli
33.	do	do	Aralaguppe
34.	do	do	Sarthavalli
35.	do	do	Goragondanahalli

ಶ್ರೀ ಟಿ. ಎಂ. ಮಂಜುನಾಥ.— ಸ್ವಾಮಿ, ತಿಪಟೂರು ತಾಲ್ಲೂಕಿನಲ್ಲಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು? ಮತ್ತು ಅವುಗಳನ್ನು ಯಾವ ಆಧಾರದ ಮೇಲೆ ಅಮಾಲ್ಗಮೇಟ್ ಮಾಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಮೊದಲು ಇದ್ದುದು 43 ಸಹಕಾರ ಸಂಘಗಳು. ಇನ್ನು ಮಾನ್ಯ ಸದಸ್ಯರು ಈ ಸಹಕಾರ ಸಂಘಗಳನ್ನು ಯಾವ ಆಧಾರದ ಮೇಲೆ ಅಮಾಲ್ಗಮೇಟ್ ಮಾಡಿದ್ದೀರಿ ಎಂದು ಕೇಳಿದರು ; norms have been fixed and on that basis we have done.

ಶ್ರೀ ಟಿ. ಎಂ. ಮಂಜುನಾಥ್.—8 ಸಹಕಾರ ಸಂಘಗಳನ್ನು ಮತ್ತೊಮ್ಮೆ ಅಮಾಲ್ಗಮೇಟ್ ಮಾಡುವಂತಹ ಪರಿಸ್ಥಿತಿ ಏನಿತ್ತು? ಇವಕ್ಕೆ ವಯಬೆಲಿಟಿ ಇರಲಿಲ್ಲವೇ? ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲದಂಥ ಕೆಲವು ಸಹಕಾರ ಸಂಘಗಳನ್ನು ಒಂದು ಗೂಡಿಸಿ ಒಳ್ಳೆಯ ಕೆಲಸ ಮಾಡುವಂತೆ ಮಾಡಬೇಕೆಂದು ಒಂದು ನಾರಂಮ್‌ನ್ನು ತಾವು ಹಾಕಿಕೊಂಡಿರುವುದು ಸರಿಯಷ್ಟೆ. ಅದರ ಪ್ರಕಾರ ತಮ್ಮ ಸ್ವಹನ್ನವಳ್ಳಿ ಎಫ್ ಎಸ್ ಸಿ,ಎಸ್,ನ್ನು ಪ್ರಾರಂಭ ಮಾಡಿ ಅದಕ್ಕೆ ಸಿಂಡಿಕೇಟ್ ಬ್ಯಾಂಕ್‌ನಿಂದ ಲಕ್ಷಾಂತರ ರೂಪಾಯಿಗಳನ್ನು ಕೊಡಿಸಿ ಪುನಃ ಅದನ್ನು ಅಮಾಲ್ಗಮೇಟ್ ಮಾಡುವ ಅವಶ್ಯಕತೆಯಾದರೂ ಏನಿತ್ತು? ಏತಕ್ಕಾಗಿ ಹಾಗೆ ಮಾಡಿದ್ದೀರಿ?

SRI K H. RANGANATH —I do not have that information. I also find that among the 45 co-operative societes Honnavalli F. S. C. S. is there At the moment I am not in a position to say whether it is merged into another society or not. I want notice for it.

ಶ್ರೀ ಟಿ. ಎಂ. ಮಂಜುನಾಥ್.—ತಾವು ಯಾವ ಆಧಾರದ ಮೇಲೆ ಈ ಸಹಕಾರ ಸಂಘಗಳನ್ನು ಅಮಾಲ್ಗಮೇಟ್ ಮಾಡಬೇಕೆಂದು ಒಂದು ನಾರಂಸ್ ಇಟ್ಟುಕೊಂಡಿದ್ದೀರಿ ಅದನ್ನು ನಾನು ಒಪ್ಪುತ್ತೇನೆ. ಆದರೆ ಸುಮಾರು 28 ಲಕ್ಷ ರೂಪಾಯಿಗಿಂತಲೂ ಹೆಚ್ಚಿಗೆ ವ್ಯವಹಾರವನ್ನು ಮಾಡಿರುವ ಈ ಸಹಕಾರ ಸಂಘವನ್ನು ಏತಕ್ಕಾಗಿ ಅಮಾಲ್ಗಮೇಟ್ ಮಾಡಿದಿರಿ? ಇದು ನಿಮ್ಮ ತತ್ವಕ್ಕೆ ತದ್ವಿರುದ್ಧವಲ್ಲವೇ? ನಮಗೆ ಇದರ ಬಗ್ಗೆ ಒಂದು ಸ್ಪಷ್ಟೀಕರಣವನ್ನು ಕೊಡಬೇಕು?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ ರೀ ಆರ್ಗನೈಜೇಷನ್ ಮಾಡಿರತಕ್ಕಂಥ 16 ಸೊಸೈಟಿಗಳಲ್ಲಿ ರೈತ ಸೇವಾ ಸಹಕಾರ ಸಂಘ ಹೊನ್ನವಳ್ಳಿ ಎಂದು ಇವೆ. I am sorry the information I furnished to the House that I d onot have the information, is not correct. FSCS,, Honnavalli is there and it is continuing as FSCS., Honnavalli.

ಶ್ರೀ ಟಿ. ಎಂ, ಮಂಜುನಾಥ್.—ಹೊನ್ನವಳ್ಳಿ ಸಹಕಾರ ಸಂಘಕ್ಕೆ ಸಂಬಂಧಪಟ್ಟ ಕೆಲವು ಗ್ರಾಮಗಳನ್ನು ತೆಗೆದು ಹಾಕಿ ಕೆಲವು ಹೊಸ ಗ್ರಾಮಗಳನ್ನು ಅಂದರೆ ಸುಮಾರು 8-10 ಮೈಲಿಗಳ ದೂರದಲ್ಲಿರುವ ಸೊಸೈಟಿಗಳಿಗೆ ಹಾಕಿ ಅಮಾಲ್ಗಮೇಟ್ ಮಾಡಿದ್ದೀರಿ. ಆದ್ದರಿಂದ ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಸರಿಯಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಹೇಳಿದರು ಹೊನ್ನವಳ್ಳಿ ಎಫ್. ಎಸ್. ಸಿ. ಎಸ್. ಕೋಆಪರೇಟೀವ್ ಸೊಸೈಟಿಯನ್ನು ರಿಆರ್ಗನೈಸ್ ಮಾಡಿದ್ದೀರೆಂದು. ಮತ್ತು ಕೆಲವು ಸೊಸೈಟಿಗಳನ್ನು ತೆಗೆದಿದ್ದೀರೆಂದು. ಆದರೆ ಬಗ್ಗೆ ಮಾಹಿತಿಯನ್ನು ತರಿಸಿ ವಿರಿಷೈ ಮಾಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ.—ತಮ್ಮ ತಾಲ್ಲೂಕಿನಲ್ಲಿ ಯಾವ ಯಾವ ಸೊಸೈಟಿಗಳು ಚೆನ್ನಾಗಿ ನಡೆಯುತ್ತಾ ಇರತಕ್ಕಂಥ ಸೊಸೈಟಿಗಳು ಇವೆ. ಮತ್ತು ಡಿಫಾಲ್ಟ್ ಆಗಿರತಕ್ಕ ಸೊಸೈಟಿಗಳೆಲ್ಲ ಇದುವರೆಗೂ ಜನರಲ್ ಬಾಡಿ ಮೀಟಿಂಗ್ ಆಗದಿರುವುದಕ್ಕೆ ತಮ್ಮ ಅಭಿಪ್ರಾಯವೇನು?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ ನಾನು ಯಾವುದಕ್ಕೂ ಕೈ ಹಾಕಿಲ್ಲ. 35 ಸಹಕಾರಿ ಸಂಘಗಳು ಇದ್ದು ಇದರಲ್ಲಿ 7 ಸಹಕಾರ ಸಂಘಗಳನ್ನು ರಿಜ್ಯೆನ್ ಮಾಡಿದ್ದೇವೆ. 35 ಸಹಕಾರ ಸಂಘಗಳು ರಿಆರ್ಗನೈಸ್ ಮಾಡಿ 16 ಸಹಕಾರಿ ಸಂಘಗಳನ್ನು ಪುನರ್‌ರಚನೆ ಮಾಡಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್ —ಸೇವಾ ಸಹಕಾರ ಸಂಘಗಳಲ್ಲಿ ನಾಮಕರಣ ಮಾಡಿರತಕ್ಕಂಥವರು ಡಿಫಾಲ್ಟರ್ಸ್ ಮತ್ತು ಹಣವನ್ನು ತಿಂದು ಕ್ರಿಮಿನಲ್ ಕೇಸ್‌ಗೆ ಒಳಗಾಗಿರತಕ್ಕಂಥವರನ್ನೂ ನಾಮಕರಣ ಮಾಡಿದ್ದಾರೆಂದು ದೂರು ಬಂದಿದ್ದರೂ ಸಹ ಅನೇಕ ಸೊಸೈಟಿಗಳಲ್ಲಿ ಈ ಏಳು ಸೊಸೈಟಿಗಳನ್ನು ಪ್ರತ್ಯೇಕವಾಗಿ ಉಳಿಸಿಕೊಂಡಿರುವುದರ ಔಚಿತ್ಯವಾದರೂ ಏನು?

ಶ್ರೀ ಕೆ. ಎಚ್. ರಂಗನಾಥ್.—ಉಳಿಸಿಕೊಂಡಿರುವುದಕ್ಕೆ ಕಾರಣವನ್ನು ವಿಚಾರಣೆ ಮಾಡುತ್ತೇನೆ. ಮತ್ತು ಒಂದು ಸರ್ಕ್ಯೂಲರ್ ಕಳುಹಿಸಿ ಡಿಫಾಲ್ಟರ್ಸ್ ಯಾರು ಯಾರನ್ನು ಕಾನೂನು ಬಾಹಿರವಾಗಿ ನಾಮಕರಣ ಮಾಡಿದ್ದಾರೆ ಅದನ್ನು ತಿಳಿಸಬೇಕೆಂದು ಸೂಚನೆ ಕೊಟ್ಟಿದ್ದೇನೆ.